# ಗಜವದನ ಬೇಡುವೆ ಗೌರಿತನಯ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 15.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 02.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 106.
4. **Note:** The wordings are as per Ref. 2. The wordings in Ref. 1 are almost similar to Ref. 2. The wordings in Ref. 3 are same. Few differences in Ref. 1. are not considered here. Singer has followed these wordings (Ref. 2).

ರಾಗ: ಧನ್ಯಾಸಿ ತಾಳ: ಆದಿ

ಗಜವದನ ಬೇಡುವೆ ಗೌರೀತನಯ ॥ ಪ ॥
ತ್ರಿಜಗ ವಂದಿತನೆ ಸುಜನರ ಪೊರೆವನೆ ॥ ಅಪ ॥

ಪಾಶಾಂಕುರಧರ ಪರಮ ಪವಿತ್ರ
ಮೂಷಕ ವಾಹನ ಮುನಿ ಜನ ಪ್ರೇಮ ॥ ೧ ॥

ಮೋದದಿ ನಿನ್ನಯ ಪಾದವ ತೋರೋ
ಸಾಧು ವಂದಿತನೆ ಆದರದಿಂದಲಿ ॥ ೨ ॥

ಸರಸಿಜನಾಭ ಶ್ರೀ ಪುರಂದರ ವಿಠಲನ
ನಿರುತ ನೆನೆಯುವಂತೆ ದಯಮಾಡೋ ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಗಜವದನ** – ಆನೆಯ ಮೊಗದವನು. ಆನೆಯ ಮೊಗವೆಂದರೆ ಮಾಧ್ವ ಸಿದ್ಧಾಂತದ ಪ್ರಕ್ರಿಯೆಯಲ್ಲಿ ಜಾಗ್ರದವಸ್ಥೆಯ (ವಿಶ್ವ) ಸಂಕೇತ.

**ಗೌರಿ** = ಪಾರ್ವತಿ

**ತನಯ** = ಮಗ

**ತ್ರಿಜಗ ವಂದಿತನೆ –** ಮೂರು ಲೋಕಗಳ ನಿವಾಸಿಗಳಿಂದ ಪೂಜೆಗೊಳ್ಳುವವನೇ.

**ಪಾಶಾಂಕುಶಧರ –** ವಿಶ್ವನಾಮಕ ಪರಮಾತ್ಮನ ಪ್ರೇರಣೆಯಿಂದಾಗಿ ಜಾಗ್ರದವಸ್ಥೆಯಲ್ಲಿ ವಿಷಯಗಳ ಸಂಬಂಧವಿರುವುದು ಪಾಶದ ಸಂಕೇತ; ವಿಶ್ವನಾಮಕ ಪರಮಾತ್ಮನ ನಿಯಾಮಕತ್ವವನ್ನು ಅಂಕುಶ ಸೂಚಿಸುತ್ತದೆ.

**ಮೂಷಕ ವಾಹನ –** ಮೂಷಕವೆಂದರೆ ಕದ್ದೊಯ್ಯುವುದು (ಮೋಷತಿ ಅಪಹರತಿ); ಮನಸ್ಸನ್ನು ಅಪಹರಿಸುವ ಇಂದ್ರಿಯ ವಿಷಯಗಳು; ಜಾಗ್ರದವಸ್ಥೆಗೆ ಆಧಾರ ಭೂತವಾದುವು. ಇವುಗಳನ್ನೇರಿರುವನೆಂದರೆ ಇವುಗಳ ಮೂಲಕ ಜಾಗ್ರತನಾಗಿರುವವನು.

**ನಿರುತ ನೆನೆಯುವಂತೆ –** ತನ್ನ ಅಂತರ್ಯಾಮಿಯೂ ಪ್ರೇರಕನೂ ಆಗಿರುವ ವಿಶ್ವನಾಮಕ ಪರಮಾತ್ಮನನ್ನು ಅರಿತುಕೊಳ್ಳುವಂತೆ.

**Classification:** Keerthane
**Ankita:** sri purandara vittala
**Location:** NA
**Category:** Ganesha stuti, prarthane,
**Sub-Category:** gajavadana, ganesha, parvati, mushaka, ili, sadhu, prema, daya,
**Pravachana:** NA
**Explanation:** NA